# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**
**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್, 3ನೇ ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

---

**ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/846/2020-21**      **ದಿನಾಂಕ:03-04-2021**

## ದಿನಾಂಕ:03-04-2021 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:03-04-2021ರಂದು ಬೆಳ್ಳಿಗೆ 10:30 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಗಾಳಿಆಂಜನೇಯ ದೇವಸ್ಥಾನ)ದಲ್ಲಿ ನಡೆದಿರುತ್ತದೆ. ಸಭೆಯ ನಡವಳಿಗಳು ಈ ಕೆಳಕಂಡಂತೆ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಸಹಾಯಕ ಕಾನೂನು ಅಧಿಕಾರಿ, ಕಾನೂನು ಕೋಶ | ಹಾಜರಾಗಿರುತ್ತಾರೆ. |
| 2 | ಶ್ರೀ ಕೃಷ್ಣಮೂರ್ತಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ.ಗಂಗಣ್ಣಯ್ಯ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುವುದಿಲ್ಲ. |
| 5 | ಶ್ರೀ.ಎನ್.ಕೃಷ್ಣಮೂರ್ತಿ | ಸದಸ್ಯರು | ತೋಟಗಾರಿಕೆ | ಹಾಜರಾಗಿರುವುದಿಲ್ಲ. |
| 6 | ಶ್ರೀ.ಶಿವಕುಮಾರ್ | ಬೀದಿ ದೀಪಗಳ ನಿರ್ವಹಣೆ | | ಹಾಜರಾಗಿರುತ್ತಾರೆ. |

02/04/2021

| | | | | |
|---|---|---|---|---|
| | | ಗುತ್ತಿಗೆದಾರರ ಪ್ರತಿನಿಧಿ | | |
| 7 | ಶ್ರೀ.ಚಿದಾನಂದ.ಎಂ.ಬಿ | ಸದಸ್ಯರು | ಅರಣ್ಯ ಇಲಾಖೆ | ಹಾಜರಾಗಿರುವುದಿಲ್ಲ. |
| 8 | ಶ್ರೀ.ಜಗನಾಥ್ | ಸದಸ್ಯರು | ಕಿರಿಯ ಅಭಿಯಂತರರು (ಬೆಸ್ಕಾಂ) | ಹಾಜರಾಗಿರುತ್ತಾರೆ. |
| 9 | ಶ್ರೀ.ಹನುಮಂತಪ್ಪ.ಎಂ | ಸದಸ್ಯರು | ಪಶುಪಾಲನ ಇಲಾಖೆ | ಹಾಜರಾಗಿರುವುದಿಲ್ಲ. |
| 10. | ಶ್ರೀ.ಬಾಲರಾಜು | ಸದಸ್ಯರು | ಕಾಮಗಾರಿ ನಿರೀಕ್ಷಕರು | ಹಾಜರಾಗಿರುತ್ತಾರೆ. |
| 11. | ಶ್ರೀ.ಸಿ.ನಾರಾಯಣ | ಸದಸ್ಯರು | ಅಧ್ಯಕ್ಷರು ಚಂದ್ರಾಬಡಾವಣೆ ನಿವಾಸಿಗಳ ಸಂಘ | ಹಾಜರಾಗಿರುತ್ತಾರೆ. |
| 12. | ಶ್ರೀಮತಿ.ವಾಣಿ | ಸದಸ್ಯರು | ಮಹಿಳಾ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 13. | ಶ್ರೀ.ಸಿ.ಹೆಚ್.ಪೈ | ಸದಸ್ಯರು | ಅಧ್ಯಕ್ಷಕರು ಸ್ಕೈ ಲೈನ್ ಅಪಾರ್ಟ್‌ಮೆಂಟ್ | ಹಾಜರಾಗಿರುವುದಿಲ್ಲ. |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:31–3–2021ರಂದು ಸಭೆಯ ಸೂಚನಾ ಪತ್ರವನ್ನು ವಾರ್ಡ್–132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಹಾಗೂ ವಾರ್ಡ್–132 ವಾಟ್ಸ್ ಆಫ್ ಗ್ರೂಪ್ ಗೆ ನೋಟಿಸನ್ನು ಹಾಕಲಾಗಿರುತ್ತದೆ. ಹಾಗೂ ಸಭೆಗೆ ಹಾಜರಾಗಲು ವಾರ್ಡ್–132 ಕ್ಕೆ ಸಂಬಂಧಿಪಟ್ಟ ಎಲ್ಲಾ ಅಧಿಕಾರಿ / ಸಿಬ್ಬಂಧಿಯನ್ನು ಕೋರಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ಹಾಗೂ ಸಹಾಯಕ ಕಾನೂನು ಅಧಿಕಾರಿ ರವರು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸಭೆಯಲ್ಲಿ ಓದಲಾಯಿತು.

ಮೇಲೆ ಹಾಜರಿದ್ದ ಅಧಿಕಾರಿಗಳು ಮತ್ತು ಸಮೀತ್ತಿ ಸದಸ್ಯರು ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ ಮತ್ತು ಕಾಮಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಇರುವ ಸಮಸ್ಯೆಗಳನ್ನು ಮತ್ತು ಅವುಗಳನ್ನು ಪರಿಹಾರ ಮಾಡುವ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

03/04/2021

1. **ಕೋವಿಡ್–19**: ಕೋವಿಡ್–19 ವೈರಸ್ ಪರೀಕ್ಷೆ ವಾರ್ಡ್ ಮಟ್ಟದಲ್ಲಿ ನಡೆಯುತ್ತಿದ್ದು ವಾರ್ಡ್ ಮಟ್ಟದಲ್ಲಿ ಕೋರೊನ ಪಾಸಿಟೀವ್ ಪ್ರಕರಣಗಳು ಕಂಡುಬರುತ್ತಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿರುತ್ತಾರೆ. ಇದಲ್ಲದೇ ವ್ಯಾಕ್ಸಿನ್ ನೀಡುವಿಕೆ ವಾರ್ಡ್‌ನಲ್ಲಿ ಸ್ಥಳಾವಕಾಶ ಇಲ್ಲದಿರುವುದನ್ನು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯ ಗಮನಕ್ಕೆ ತಂದಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಮಹಿಳಾ ಸದಸ್ಯರಾದ ಶ್ರೀಮತಿ.ವಾಣಿ ಮತ್ತು ಶ್ರೀ.ಸಿ.ನಾರಾಯಣ ಅಧ್ಯಕ್ಷಕರು ಚಂದ್ರಾ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು 132 ಅತ್ತಿಗುಪ್ಪೆ ವಾರ್ಡಿನಲ್ಲಿ ಕೋವಿಡ್ ವ್ಯಾಕ್ಸಿನ್‌ನನ್ನು ನೀಡುವುದರಲ್ಲಿ ಕ್ರಮವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು 132ರ ವಾರ್ಡ್‌ನಲ್ಲಿ ಪರಿಕ್ಷಿಸಲು ಕನಿಷ್ಟ ಪಕ್ಷ 3 ರೂಮ್‌ಗಳ ಅವಶ್ಯಕತೆ ಇರುತ್ತದೆಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಹಿಳಾ ಸದಸ್ಯರಾದ ಶ್ರೀಮತಿ.ವಾಣಿಯವರು ವಾರ್ಡ್ ಮಟ್ಟದಲ್ಲಿ ಖಾಸಗಿ ಕಟ್ಟಡವನ್ನು ಬಾಡಿಗೆ ಪಡೆದು ಆಗಲಿ ಅಥವಾ ಶಾಲಾ ಕಟ್ಟಡದಲ್ಲಿ ಕೋವಿಡ್ ವ್ಯಾಕ್ಸಿನ್ ನೀಡಲು ಕ್ರಮವಹಿಸಲು ಕೋರಿಕೊಂಡಿರುತ್ತಾರೆ. ಅದೇ ರೀತಿಯಾಗಿ ಶ್ರೀ.ಸಿ.ನಾರಾಯಣ ರವರು ದೇವಸ್ಥಾನದಲ್ಲಿ ಸಾಕಷ್ಟು ಸ್ಥಳಾವಕಾಶ ಇರುವುದನ್ನು ಹಾಗೂ ಕೋವಿಡ್ ವ್ಯಾಕ್ಸಿನ್ ನೀಡಲು ಉಪಯೋಗಿಸಬಹುದಾಗಿದೆಂದು ಸಲಹೆಯನ್ನು ನೀಡಿರುತ್ತಾರೆ. ಈ ವಿಷಯದಲ್ಲಿ ಕ್ರಮವಹಿಸಲು MOH/ವಿಜಯನಗರ ರವರ ಗಮನಕ್ಕೆ ತರಲು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಲಾಗಿದೆ.

2. **ಘನತ್ಯಾಜ್ಯ ನಿರ್ವಹಣೆ:** ವಾರ್ಡ್‌ಗೆ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರು ಇಲಾಖಾ ಪರೀಕ್ಷೆಗಳ ನಿಮಿತ್ಯ ಹಾಜರಾಗಿರುವುದಿಲ್ಲ. ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಮತ್ತು ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುವ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಈ ಹಿಂದಿನ ಸಭೆಯಲ್ಲಿ ತಿಳಿಸಿ ಸೂಚಿಸಲಾಗಿತ್ತು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ಕಾರ್ಯವನ್ನು ಮಾಡಿರುವುದಿಲ್ಲ. ಆದ್ದರಿಂದ ವಾರ್ಡ್‌ನಲ್ಲಿ ದಿನಾಲು ಕೆಲಸಕ್ಕೆ ಹಾಜರಾಗುವ ಪೌರಕಾರ್ಮಿಕರ ಮತ್ತು ಟಿಪ್ಪರ್ ಸಂಖ್ಯೆಯನ್ನು ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಸಭೆಯು ಸೂಚಿಸಿದೆ.

ವಾರ್ಡ್‌ನಲ್ಲಿ ಗುತ್ತಿಗೆದಾರರು ಘನ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡುವುದಲ್ಲಿ ವಿಫಲವಾಗಿದ್ದರಿಂದ ವಾರ್ಡಿನ ದಿನಾಂಕ:18–03–2021ರಂದು ನೋಟೀಸನ್ನು ಜಾರಿಗೊಳಿಸಲಾಗಿತ್ತು. ದೂರವಾಣಿ ಮುಖಾಂತರ ಹಿರಿಯ ಪರಿವೀಕ್ಷಕರು ಕರೆ ಮಾಡಿ ಕಸ ವಿಲೇವಾರಿ ಸರಿಯಾಗಿ ನಿರ್ವಹಣೆ ಮಾಡಲಾಗುತ್ತದೆ ಎಂಬುದನ್ನು ತಿಳಿಸಿರುತ್ತಾರೆ.

3. **ವಾರ್ಡ ಮಟ್ಟದ ಕಾಮಗಾರಿ:** (ಎ) ವಾರ್ಡ್‌ದಲ್ಲಿರುವ ವಿಶ್ವ ಮಾನವ ಪಾರ್ಕ್ ಗೆ ಹೊಂದಿಕೊಂಡಂತೆ ಮೋರಿಯ ಮೇಲೆ ಇಟ್ಟಿರುವ ಪೆಟ್ಟಿಗೆ ಅಂಗಡಿಯನ್ನು ತೆಗೆಯಲು ಸಭೆಯಲ್ಲಿ ಸದಸ್ಯರು ಕೋರಿಕೊಂಡಿರುತ್ತಾರೆ.

(ಬಿ) ಗಣಪತಿ ದೇವಸ್ಥಾನದ ಹಿಂದೆ ಹಾಗೂ ಚಂದ್ರ ಗಿರಿ ಪ್ಯಾಲೇಸ್ ಸರ್ಕಲ್‌ನಲ್ಲಿ ಜೀಬ್ರಾ ಕ್ರಾಸಿಂಗ್ ಹಾಕಬೇಕೆಂದು ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ.

03/04/2021

(ಸಿ) ಬಿ.ಟಿ.ಎಸ್ ಗ್ಯಾರೇಜ್‌ನ ಪಕ್ಕದ ಮೋರಿ ಮುಚ್ಚಿರುವುದನ್ನು ಹಾಗೂ ಸದರಿ ರಸ್ತೆಯಲ್ಲಿ ಒಳಚರಂಡಿ ಬ್ಲಾಕೇಜ್ ಆಗಿರುವುದನ್ನು ತೆರವುಗೊಳಿಸಬೇಕೆಂದು ಸದಸ್ಯರಾದ ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ.

(ಡಿ) ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ ಚಂದ್ರಾ ಲೇಔಟ್ ಕಡೆಗೆ ತಿರುವು ಪಡೆಯುವಾಗ ವಾಹನ ಚಾಲಕರಿಗೆ ಸಹಾಯಕವಾಗುವಂತೆ ಚಂದ್ರಾ ಬಡಾವಣೆಗೆ ದಾರಿಯೆಂದು ನಾಮಫಲಕ ಅಳವಡಿಸಬೇಕೆಂದು ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ.

ಈ ಮೇಲಿನ ವಿಷಯಗಳಿಗೆ ಸಹಾಯಕ ಅಭಿಯಂತರರು 132 ರವರು ಸೂಕ್ತ ಕ್ರಮಕೈಗೊಳ್ಳಲು ಸಭೆ ಸೂಚಿಸಿದೆ.

4. **ಅರಣ್ಯ ವಿಭಾಗ:** ಈ ಹಿಂದೆ ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪ್ಯೆ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಶ್ರೀ.ಸಿ.ನಾರಾಯಣ ರವರು ಚಂದ್ರಾಲೇಔಟ್‌ನ 80 ಅಡಿ ರಸ್ತೆಯ (ಪೋಸ್ಟ್ ಆಫಿಸ್ ರಸ್ತೆಯಲ್ಲಿ) ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಿ ಟ್ರಿಂಮ್ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಹಲವಾರು ಬಾರಿ ಇದರ ಬಗ್ಗೆ ಕ್ರಮವಹಿಸಲು ಕೋರಲಾಗಿರುತ್ತದೆ. ಆದರೆ ಇಲ್ಲಿಯವರೆಗೆ ಯಾಕ ಕ್ರಮವಹಿಸಿಲ್ಲ ಎಂದು ಸದಸ್ಯರು ಕೋರಿರುತ್ತಾರೆ. ಆದ್ದರಿಂದ ದಕ್ಷಿಣ ವಲಯದ ಅರಣ್ಯಾಧಿಕಾರಿಗಳು ಈಕೂಡಲೇ ಈ ಮೇಲಿನ ವಿಷಯದಲ್ಲಿ ಕ್ರಮವಹಿಸಲು ಸೂಚಿಸಿದೆ. ವಾರ್ಡ್ ಮಟ್ಟದಲ್ಲಿ ಕೈಗೊಳ್ಳುವ ಕಾರ್ಯಗಳ ಬಗ್ಗೆ ವಾಟ್ಸ್ ಆಫ್ ಗ್ರೂಫ್‌ನಲ್ಲಿ ಹಾಕಲು ಕೋರಿದೆ.

5. **ವಾರ್ಡನಲ್ಲಿರುವ ಫುಟ್‌ಪಾತ್**:ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಹಾಗೂ ರಸ್ತೆಗುಂಡಿಗಳನ್ನು ಮುಚ್ಚಲು ಮತ್ತು ಅನಧೀಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಕ್ರಮಕೈಗೊಳ್ಳಲು ವಾರ್ಡ್ ಸಂಖ್ಯೆ:132ರ ಸಹಾಯಕ ಅಭಿಯಂತರರಿಗೆ ಸಭೆಯು ಸೂಚಿಸಲಾಯಿತು.

6. **ಬೀದಿ ದೀಪಗಳ ನಿರ್ವಹಣೆ:** ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಲವಾರು ಬಾರಿ ಗಣಪತಿ ಸರ್ಕಲ್, ದಿವಾರ್ ಹೋಟೆಲ್ ಹತ್ತಿರ ದೀಪವನ್ನು ಹಾಕಲು ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ. ಈ ಹಿಂದಿನ ಸಭೆಯಲ್ಲಿ ಹಾಜರಿರುವ ಕಿರಿಯ ಅಭಿಯಂತರರು(ವಿದ್ಯುತ್)ರವರಿಗೆ ಈ ಕೂಡಲೇ ದುರಸ್ಥಿಗೊಂಡಿರುವ ಬೀದಿ ದೀಪಗಳನ್ನು ಸರಿಪಡಿಸುವುದು ಮತ್ತು ಅಗತ್ಯ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಿದೆ. ಸದರಿ ಅಧಿಕಾರಿಯವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಸಭೆಯ ಗಮನಕ್ಕೆ ಸದಸ್ಯರು ತಂದಿರುತ್ತಾರೆ. ಆದ್ದರಿಂದ ದಕ್ಷಿಣ ವಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್)ರವರು ಈ ಕೂಡಲೇ ಕ್ರಮವಹಿಸಲು ಕೋರಿದೆ. ಕ್ರಮ ಕೈಗೊಂಡ ವರದಿಯನ್ನು ಸಭೆಯ ಗಮನಕ್ಕೆ ತರಲು ಕೋರಿದೆ.

03/04/2021

7. **ರಸ್ತೆಯ ಗುಂಡಿ:** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಶ್ರೀ.ಸಿ.ನಾರಾಯಣ ಅಧ್ಯಕ್ಷರು ಚಂದ್ರ ಬಡಾವಣೆಯ ನಿವಾಸಿ ಸಂಘ ರವರು ನಾಗರಭಾವಿ ಹಂತದಿಂದ ಚಂದ್ರಾ ಲೇಔಟ್ 80 ಅಡಿ ರಸ್ತೆಯ ಗುಂಡಿಗಳನ್ನು ಮುಚ್ಚಲಾಗಿರುವುದನ್ನು ಸಭೆಯ ಗಮನಕ್ಕೆ ತಂದು ಪಾಲಿಕೆ ತೆಗೆದುಕೊಂಡ ಕ್ರಮಕ್ಕೆ ಸಂತಸ ವ್ಯಕ್ತಪಡಿಸಿರುತ್ತಾರೆ.

8. **BWSSB:** ಸದರಿ ಇಲಾಖೆಯಿಂದ ನಿಯೋಜಿಸಿದ ಅಧಿಕಾರಿಯು ಅನಿವಾರ್ಯ ಕಾರಣಗಳಿಂದ ಹಾಜರಾಗಿರುವುದಿಲ್ಲ. ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಲು ಕೋರಿದೆ. ಹಾಗೂ ಈ ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು BWSSB ಇಲಾಖೆಗೆ ಸೂಚಿಸಿದೆ.

9. **ತೆರಿಗೆ:** ಈ ಹಿಂದಿನ ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು ಆದರೆ ಕಂದಾಯದ ವಿವರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಕಂದಾಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಸಂಗ್ರಹವಾಗುವ ತೆರಿಗೆ ವಿವರವನ್ನು ಸಭೆಗೆ ಸಲ್ಲಿಸಲು ಸೂಚಿಸಿದೆ. ಇಂದಿನ ಮತ್ತು ಹಿಂದಿನ ಸಭೆಗೆ ಕಂದಾಯ ವಿಭಾಗದಿಂದ ಯಾವುದೇ ಸಿಬ್ಬಂಧಿ ಹಾಜರಾಗಿರುವುದಿಲ್ಲ.

10. **ತೋಟಗಾರಿಕೆ:** ಚಂದ್ರಾ ಲೇಔಟ್‌ನ ಪ್ರಸನ್ನ ಗಣಪತಿ ದೇವಸ್ಥಾನದ ಹಿಂದುಗಡೆ ಇರುವ ಪಾರ್ಕನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ಸದಸ್ಯರಾದ ಶ್ರೀ.ಸಿ.ನಾರಾಯಣ ರವರು ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರು ಹಾಗೂ ತೋಟಗಾರಿಕ ಅಧೀಕ್ಷಕರು (ದಕ್ಷಿಣ)ರವರು ಕ್ರಮವಹಿಸಲು ಕೋರಿದೆ.

11. **ಟ್ರಾಫೀಕ್**: ಚಂದ್ರಾ ಬಡಾವಣೆಯ 80 ಅಡಿ ರಸ್ತೆಯಲ್ಲಿರುವ ವಿನಾಯಕ ಆಸ್ಪತ್ರೆ ಮುಂದುಗಡೆ ಮಾತ್ರ ಅಂದರೆ ಒಂದು ಕಡೆ ಮಾತ್ರ ವಾಹನಗಳನ್ನು ನಿಲ್ಲಿಸಲು ಪಾರ್ಕಿಂಗ್ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಒಂದು ವಾರ ರಸ್ತೆಯ ಒಂದು ಬದಿ ಇನ್ನೊಂದು ವಾರ ರಸ್ತೆಯ ಇನ್ನೊಂದು ಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ಶ್ರೀ.ಸಿ.ನಾರಾಯಣ ರವರು ಸಭೆಗೆ ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಬ್ಯಾಟರಾಯಣಪುರ ಸಂಚಾರಿ ಪೊಲೀಸ್ ಠಾಣೆಯವರು ಕ್ರಮವಹಿಸಲು ಕೋರಿದೆ.

03/04/2021

12. <u>ಬೀದಿ ವ್ಯಾಪಾರ</u>: ಮಹಿಳಾ ಸದಸ್ಯರಾದ ಶ್ರೀಮತಿ.ವಾಣಿ ರವರು ವಾರ್ಡ್‌ನಲ್ಲಿ ಬೀದಿ ವ್ಯಾಪಾರಿಗಳು ಮೈಕನ್ನು ಜೋರಾಗಿ ಅಳವಡಿಸಿಕೊಂಡು ವ್ಯಾಪಾರ ಮಾಡುತ್ತಿರುವುದು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಡೆಗಟ್ಟಲು ಕ್ರಮವಹಿಸಲು ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಚಂದ್ರಾ ಬಡಾವಣೆ ಪೊಲೀಸ್ ಠಾಣೆ ಅಧಿಕಾರಿಗಳು ಕ್ರಮವಹಿಸಬೇಕೆಂದು ಸಭೆಯು ಕೋರಿದೆ.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರೆತಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

03/04/2021

**ಕಾರ್ಯದರ್ಶಿಗಳು**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ

**ನೋಡೆಲ್ ಅಧಿಕಾರಿ**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ